ಒಳಗಾಗಿದ್ದಾನೆ ಎಂದೇ ಭಾವಿಸಬೇಕು. ಮರೆವಿನ ಪಾತಾಳದ ಕೆಸರಿನಲ್ಲಿ ಆತ ಮುಳುಗಿ ಹೋಗುತ್ತಾನೆ. ನಾನೀಗ ಕಾಲಿಂದ ದೇಹದ ಅರ್ಧದ ತನಕ ಮುಳುಗಿದ್ದೇನೆ. ಆ ಅರ್ಧ ನನ್ನ ಭೂತಕಾಲವೆಂಬುದು ಕ್ರೂರ ಸತ್ಯ. ಉಳಿದ ಅರ್ಧ ನನ್ನ ಭವಿಷ್ಯವಲ್ಲದೆ ಇನ್ನೇನು? ಇದರ ನಡುವಿನ ಹುಚ್ಚು ಹಗಲು ರಾತ್ರಿಗಳ ಎದುರಲ್ಲಿ ಅರ್ಥಶೂನ್ಯವಾದ ಹಳಿಗಳು ಬಿದ್ದುಕೊಂಡಿವೆ. ಅದರಲ್ಲಿ ಆಗೊಮ್ಮೆ ಈಗೊಮ್ಮೆ ಮನುಷ್ಯನ ಕಣ್ಣುಗಳಿಂದ ಹಿಂಬಾಲಿಸಲಾಗದಷ್ಟು ವೇಗವಾಗಿ ಓಡಿ ಮರೆಯಾಗುವ ರೈಲುಗಾಡಿಗಳು. ಅವುಗಳ ಗರ್ಜನೆ... ನಾನು ಈ ಹಸಿರು ಬಾವುಟವನ್ನು ಎತ್ತಿ ತೋರಿಸುವುದಾದರೂ ಯಾಕೆ ಎಂದು ಹಲವು ಸಲ ಅಂದುಕೊಂಡಿದ್ದಿದೆ ಸರ್. ಈ ಬಾವುಟವನ್ನು ಯಾರಾದರೂ ಗಮನಿಸುತ್ತಾರೆಯೇ ಎಂದಾದರು ನನಗೆ ತಿಳಿಸಿ ಸರ್.

ಇಷ್ಟು ಬರೆಯುವಷ್ಟರಲ್ಲಿ ಅವನ ಏಕಾಗ್ರತೆ ಭಂಗವಾಯಿತು. ದೂರದಿಂದ ಸದ್ದು ಕೇಳಿಸುತ್ತಿದೆಯೇ? ರೈಲುಗಾಡಿಯ ಸದ್ದು? ಪ್ಯಾಸೆಂಜರೋ ಗೂಡ್ಸೋ?

ನಿವೇದಿಸಲಾಗದ ಪ್ರೇಮದಂತೆ ಆ ಸದ್ದು ಯಾವಾಗಲೂ ಆತನ ಉಸಿರುಗಟ್ಟಿಸುತ್ತಿತ್ತು. ನಿಜದಲ್ಲಿ ಮಾಸ್ಟರನ್ನು ಲೋಕದೊಂದಿಗೆ ಬೆಸೆಯುತ್ತಿದ್ದ ಏಕಕೊಂಡಿ ಶಾಪಾಟ್ಟಿ. ಶಾಪಾಟ್ಟಿಯೆಂದರೆ ಸುಮಾರು ಮನುಷ್ಯರೂಪವೇ ಇರುವ ಕೆಲಸದವ. ಕೆಲಸದವ ಎಂಬ ಪದ ಅಷ್ಟು ಸರಿ ಎಂದೂ ಅನಿಸುತ್ತಿಲ್ಲ. ಹಸಿದಾಗೆಲ್ಲ ಒಂದೇ ರುಚಿಯ ತಾಳಮೇಳಗಳನ್ನು ಬೆರೆಸಿದ ಆಹಾರದೊಂದಿಗೆ ಅವ ಬರುತ್ತಾನೆ. ಶಾಪಾಟ್ಟಿಯ ಅಸಹ್ಯಕರ ಅವಯವಗಳು ಮತ್ತು ರೋಷ ಉಕ್ಕುವ ಗೋತ್ರ ಮಹಿಮೆ ಸಾರುವ ಕಣ್ಣುಗಳು ಮಲದ ಸುತ್ತ ಗಿರಕಿ ಹೊಡೆಯುವ ನೊಣಗಳನ್ನು ನೆನಪಿಸುವಂತಿತ್ತು. ಮೇಲಧಿಕಾರಿಗಳಿಗೆ ಬರೆಯುತ್ತಿದ್ದ ಪತ್ರಗಳನ್ನು ರಿಜಿಸ್ಟರ್ ಮಾಡಲು ಮಾಸ್ಟರ್ ಅದೇ ಶಾಪಾಟ್ಟಿಯನ್ನು ನೆಚ್ಚಿಕೊಂಡಿದ್ದ. ತಿಂಗಳ ಸಂಬಳವೆಂದು ಆತ ಏನೋ ತಂದುಕೊಡುತ್ತಾನೆ. ಆತ ತರುತ್ತಿದ್ದ ದಿನಪತ್ರಿಕೆಗಳು ಕೂಡ ನಕಲಿ ಎಂದು ಮಾಸ್ಟರನ ಅನುಭವಕ್ಕೆ ಬಂದಿತ್ತು.

ಮಾಸ್ಟರ್ ಪ್ರತಿಸಲವೂ ಕೇಳುತ್ತಾನೆ:

'ನೀವು ಆ ಕಾಗದ ರಿಜಿಸ್ಟರ್ ಮಾಡಿದಿರಿ ತಾನೆ?'

'ಮೇಲಧಿಕಾರಿಗಳನ್ನು ನೇರವಾಗಿ ಕಂಡು ನನ್ನ ವಿಷಯವನ್ನು ಒಮ್ಮೆ ಹೇಳಬಹುದಿತ್ತಲ್ಲ?'

'ಬದಲಿಗೆ ಒಂದೇ ಒಂದು ದಿನದ ಮಟ್ಟಿಗಾದರೂ ಒಬ್ಬರನ್ನು ಕಳಿಸಿ ಎಂಬ ನನ್ನ ಅಹವಾಲನ್ನು ಮುಟ್ಟಿಸಿದಿರಾ?'

ಶಾಪಾಟ್ಟಿ ಎಲ್ಲವನ್ನು ನೀರಸವಾಗಿ ಕೇಳಿಸಿಕೊಳ್ಳುತ್ತಾನೆ. ಆಗೆಲ್ಲ ಆತ ಪಿಶಾಚಿ ಮತ್ತು ಮನುಷ್ಯರ ನಡುವಿನ ದಳ್ಳಾಳಿಯಂತೆ ಕಾಣಿಸುತ್ತಿದ್ದ.

ಶಾಪಾಟ್ಟಿಯ ಅಸಡ್ಡೆ ಮತ್ತು ಅನಾದರ ತುಂಬಿದ ಪ್ರತಿಕ್ರಿಯೆಗಳನ್ನು ಕಂಡು ಹಲವು ಸಲ ಮಾಸ್ಟರ್ ಕಿರುಚಾಡಿದ್ದ.

'ನಿಮ್ಮ ಗಮನ ಎಲ್ಲಿದೆ? ನಾನು ಹೇಳುತ್ತಿರುವುದು ನಿಮ್ಮ ಕಿವಿಗೆ ಬೀಳುತ್ತಿದೆಯೇ?'

'ನನ್ನ ಕಾಗದಗಳನ್ನೂ ಅರ್ಜಿಗಳನ್ನೂ ಮೇಲಧಿಕಾರಿಗಳಿಗೆ ತಲುಪಿಸುತ್ತಿದ್ದೀರಾ?'

ಆತ ಶೂನ್ಯವಾದ ಕಣ್ಣುಗಳೊಂದಿಗೆ ಮಾಸ್ಟರನನ್ನು ನೋಡುತ್ತಾನೆ. ಅದೆಷ್ಟು ಶತಮಾನಗಳಿಂದ ನೋಡುತ್ತಲೇ ಇರುವ ನೋಟ. ಅದರೊಂದಿಗೆ ಮಾಸ್ಟರ್ ತನ್ನ ಕೊನೆಯಿಲ್ಲದ ಸಂಕಟವನ್ನು ತಡೆಯಲು ಹರಸಾಹಸ ಪಡುತ್ತಾನೆ.

'ನಾನು ಡ್ಯೂಟಿ ಬಿಟ್ಟಾಕಿ ನನ್ನ ಪಾಡಿಗೆ ಹೋಗಿಬಿಡುತ್ತೇನೆ. ಬಿಟ್ಟು ಹೋಗುವುದಕ್ಕೆ ನನ್ನಿಂದ ಸಾಧ್ಯವಿಲ್ಲವೆಂದು ಭಾವಿಸಿದ್ದೀರಾ?'

ಆತ ಕಣ್ಣಗುಡ್ಡೆಯಿಲ್ಲದ ನೋಟದೊಂದಿಗೆ ನಿಂತಿರುತ್ತಾನೆ. ಅವತ್ತು ಕೂಡ ಇದೇ ರಂಗದ ಪುನರಾವರ್ತನೆ ನಡೆಯಿತು. ತಾನು ಎಂದಿಗಿಂತಲೂ ಹೆಚ್ಚು ಕೋಪಗೊಂಡಿದ್ದೆನೆಂದೂ ಈ ಏದುಸಿರು ಏರುತ್ತಿರುವ ವಯಸ್ಸಿನ ಕಾರಣದಿಂದಲೂ ಎಂದು ಆತ ಯೋಚಿಸಿದ.

ಬಿಟ್ಟು ಬಿಡಲಾಗದ ಶಿಕ್ಷೆಯಂತೆ ಒಳಿತೊಂದು ತನ್ನನ್ನು ಕೊರೆದು ತಿನ್ನುತ್ತಿರುವುದು ಆತನ ಅರಿವಿಗೆ ಬರುತ್ತಿತ್ತು. ತನಗೆ ಈ ಸ್ಟೇಷನ್ನಿನಲ್ಲಿ ಸಮರ್ಪಿಸಬಹುದಾದ ಸೇವೆ ಅದೊಂದೇ ಎಂದೂ ಆತ ಅರಿತ.

ಅವಘಡಗಳಿಗೆ ತಾನು ಕಾರಣವಾಗಬಾರದು. ಒಂದು ಹಳಿಯಲ್ಲಿ ಎರಡು ಗಾಡಿಗಳು ಓಡಬಾರದು.

ಕಂದಮ್ಮಗಳ ಆಕ್ರಂದನ ಕೇಳಿಸಬಾರದು. ಮಕ್ಕಳನ್ನು ಕಳಕೊಂಡ ಅಮ್ಮಂದಿರು ಇರಬಾರದು. ಆತ ಕಠಿಣ ಸಜೆಯ ಸಂಕೋಲೆಗಳ ಸದ್ದು ಕೇಳಿಸಿಕೊಂಡ. ತನಗೆ ಈ